**ಅಸಲು ದಾವಾ ನಂಃ118/2021**
**ಪಿ.ಡಬ್ಲ್ಯೂ- 01/ಗೀತಾ**

**ದಿನಾಂಕಃ 14.02.2023 ರಂದು ಸಾಕ್ಷಿಯನ್ನು ಕರೆಸಿಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಎಂ.ಎನ್.ಎಸ್.ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆಸಿರುವ ಅಂಶಗಳು ಸರಿ ಹಾಗೂ ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ದಿನಾಂಕ.25.01.1991 ರ ಮೂಲ ಹಕ್ಕು ಪತ್ರವನ್ನು ನಿ.ಪಿ.1 ಅಂತ, 2004-05 ನೇ ಸಾಲಿನ ಕರ ಆಕರಣೆ ಪ್ರತಿಯನ್ನು ನಿ.ಪಿ.2 ಅಂತ, ದಿನಾಂಕ.19.05.2004 ರ ಮರಣ ಪ್ರಮಾಣ ಪತ್ರವನ್ನು ನಿ.ಪಿ.3 ಅಂತ, 2018-19 ನೇ ಸಾಲಿನ ಆಸ್ತಿಯ ವಿವರ ಮತ್ತು ಆಸ್ತಿ ತೆರಿಗೆ ಸ್ವಯಂ ನಿರ್ಧರಣಾ ನಮೂನೆಯನ್ನು ಮತ್ತು ಕಂದಾಯ ರಸೀದಿಯನ್ನು ನಿ.ಪಿ.4 ಮತ್ತು 5 ಅಂತ, 2019-20 ನೇ ಸಾಲಿನ ಆಸ್ತಿಯ ವಿವರ ಮತ್ತು ಆಸ್ತಿ ತೆರಿಗೆ ಸ್ವಯಂ ನಿರ್ಧರಣಾ ನಮೂನೆಯನ್ನು ಮತ್ತು ಕಂದಾಯ ರಸೀದಿಯನ್ನು ನಿ.ಪಿ.6 ಮತ್ತು 7 ಅಂತ, 2017-18 ನೇ ಸಾಲಿನ ಆಸ್ತಿಯ ವಿವರ ಮತ್ತು ಆಸ್ತಿ ತೆರಿಗೆ ಸ್ವಯಂ ನಿರ್ಧರಣಾ ನಮೂನೆಯನ್ನು ಮತ್ತು ಕಂದಾಯ ರಸೀದಿಯನ್ನು ನಿ.ಪಿ.8 ಮತ್ತು 9 ಅಂತ, ಐದು ಕಂದಾಯ ರಸೀದಿಗಳನ್ನು ಕ್ರಮವಾಗಿ ನಿ.ಪಿ.10 ರಿಂದ 14 ಅಂತ, ಛಾಯ ಚಿತ್ರವನ್ನು ನಿ.ಪಿ.15 ಅಂತ, ದಿನಾಂಕ.25.03.2021 ರ ಪತ್ರದ ಸ್ವೀಕೃತಿಯನ್ನು ನಿ.ಪಿ.16 ಅಂತ ಗುರುತಿಸಲಾಯಿತು. ಆದ್ದರಿಂದ ಸದರಿ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**( ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.